**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2164 |
| 2 | ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 26-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿ.ಬಿ.ಎ) ವ್ಯಾಪ್ತಿಯಲ್ಲಿ ಎಷ್ಟು ಲಕ್ಷ ಬಿ-ಖಾತಾ ಆಸ್ತಿಗಳಿವೆ; (ಈ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಪಾಲಿಕೆವಾರು ವಿವರವಾದ ಮಾಹಿತಿ ನೀಡುವುದು) | • ದಿನಾಂಕ:10-03-2026ರ ಆಸ್ತಿತೆರಿಗೆ ತಂತ್ರಾಂಶದ ಮಾಹಿತಿಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿ.ಬಿ.ಎ) ವ್ಯಾಪ್ತಿಯಲ್ಲಿ ಒಟ್ಟು 825150 ಸ್ವತ್ತುಗಳ ವಿವರಗಳನ್ನು ಬಿ ವಹಿಯಲ್ಲಿ ದಾಖಲಿಸಲಾಗಿರುತ್ತದೆ.<br>• ಪಾಲಿಕೆವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಈ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸಲು 2025ರ ನವೆಂಬರ್ 1 ರಿಂದ ಕೈಗೊಂಡಿರುವ 100 ದಿನಗಳ ಅಭಿಯಾನಕ್ಕೆ ಮಾಲೀಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ನಗರ ಪಾಲಿಕೆಗಳವಾರು ಮಾಹಿತಿ ಒದಗಿಸುವುದು) | • ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಸಂಬಂಧ ಸಾರ್ವಜನಿಕರು ಅರ್ಜಿ ಸಲ್ಲಿಸಲು ದಿನಾಂಕ:15-10-2025 ರಿಂದ ಅವಕಾಶ ಕಲ್ಪಿಸಲಾಗಿದ್ದು, ಸದರಿ ಯೋಜನೆಯು ನಿರಂತರವಾಗಿರುತ್ತದೆ.<br>• ಈ ಸಂಬಂಧ ಸಾರ್ವಜನಿಕರಿಂದ ಸ್ವೀಕರಿಸಲಾದ ನಗರ ಪಾಲಿಕೆವಾರು ಅರ್ಜಿಗಳ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ಬಂದ ಅರ್ಜಿಗಳಲ್ಲಿ ಎಷ್ಟು ಜನ ಮಾಲೀಕರಿಗೆ ಎ-ಖಾತಾ ನೀಡಲಾಗಿದೆ; (ವಿವರವಾದ ಮಾಹಿತಿ ನೀಡುವುದು) | • ಬಿ-ಖಾತಾ ಆಸ್ತಿಗಳನ್ನು ಎ-ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಸಂಬಂಧ ತಹಲ್‌ವರೆಗೂ ಸ್ವೀಕರಿಸಲಾದ 8308 ಅರ್ಜಿಗಳ ಪೈಕಿ, 818 ಅರ್ಜಿಗಳಿಗೆ ಎ ಖಾತೆಗಳಾಗಿ ಅನುಮೋದನೆ ನೀಡಲಾಗಿರುತ್ತದೆ. ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |
| ಈ) | ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿ-ಖಾತಾ ಇರುವ ಆಸ್ತಿಗಳ ಸಂಖ್ಯೆ ಎಷ್ಟು; ಈ ಕ್ಷೇತ್ರದಲ್ಲಿ ಎ-ಖಾತೆಗೆ ಸ್ವೀಕೃತಿಗೊಂಡ ಆಸ್ತಿಗಳ ಸಂಖ್ಯೆ ಎಷ್ಟು; ಸ್ವೀಕೃತಿಗೊಂಡ ಅರ್ಜಿಗಳಲ್ಲಿ ಎಷ್ಟು ಆಸ್ತಿ ಮಾಲೀಕರಿಗೆ ಎ-ಖಾತೆ ನೀಡಲಾಗಿದೆ; (ಮಾಹಿತಿ ಒದಗಿಸುವುದು) | • ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 99744 ಸ್ವತ್ತುಗಳ ವಿವರಗಳನ್ನು ಬಿ ವಹಿಯಲ್ಲಿ ದಾಖಲಿಸಲಾಗಿದೆ. ಈ ಕ್ಷೇತ್ರದಲ್ಲಿ ಬಿ ಖಾತೆಯಿಂದ ಎ ಖಾತೆಗಾಗಿ ಸುಮಾರು 1186 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಸ್ವೀಕರಿಸಲಾದ ಅರ್ಜಿಗಳ ಪೈಕಿ 69 ಅರ್ಜಿಗಳಿಗೆ ಎ ಖಾತೆ ಅನುಮೋದನೆ ನೀಡಲಾಗಿರುತ್ತದೆ. ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಿದೆ. |

...2.

| | | |
|---|---|---|
| ಉ) | ಇ-ಸ್ವತ್ತು 2.0 ತಂತ್ರಾಂಶದಲ್ಲಿ ತಾಂತ್ರಿಕ ದೋಷಗಳ ಸಮಸ್ಯೆ ಇರುವುದರಿಂದ ಸರ್ಕಾರಕ್ಕೆ ಇ-ಸ್ವತ್ತು ಆದಾಯ ನಷ್ಟವಾಗಿರುವುದು ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಸರ್ಕಾರ ತೆಗೆದುಕೊಂಡಿರುವ ತುರ್ತು ಕ್ರಮಗಳೇನು? (ವಿವರ ನೀಡುವುದು) | • ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದುವರೆಗೆ ಇ-ಸ್ವತ್ತು 2.0 ತಂತ್ರಾಂಶದಡಿ ಒಟ್ಟು 1,21,562 ಅರ್ಜಿಗಳು ಅನುಮೋದನೆಗೊಂಡು ವಿಲೇವಾರಿ ಮಾಡಲಾಗಿದೆ.<br>• ಇ-ಸ್ವತ್ತು ತಂತ್ರಾಂಶದ Citizen Interface ನಲ್ಲಿ ಮುಖ್ಯವಾಗಿ ಈ ಕೆಳಕಂಡ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ:<br>a) ಋಣಭಾರ ಪ್ರಮಾಣ ಪತ್ರ ಸಲ್ಲಿಕೆ.<br>b) ಅರ್ಜಿಗಳ ಸಲ್ಲಿಕೆ ಮತ್ತು Save ಮಾಡುವುದು.<br>c) ಇ-ಖಾತಾ download ಮಾಡುವುದು.<br>d) ವಿದ್ಯುತ್ ಸರಬರಾಜು ಕಂಪನಿಗಳೊಂದಿಗಿನ ಸಂಯೋಜನೆ.<br>• ಅಲ್ಲದೆ, ನಮೂನೆ-11 ಬಿ ಖಾತೆಗಳನ್ನು, ನಮೂನೆ-11 ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು, ಹೊಸ ಬಹುಮಹಡಿ (ಅಪಾರ್ಟ್‌ಮೆಂಟ್)ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ. |

**ನಅಇ 136 ಎಂಎನ್‌ಯು 2026**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

**ಅನುಬಂಧ-1**

| ಕ್ರ.ಸಂ | ಪಾಲಿಕೆ | ಅರ್ಜಿಗಳ ಸಂಖ್ಯೆ |
|---|---|---|
| 1 | ಕೇಂದ್ರ | 20428 |
| 2 | ಪೂರ್ವ | 245368 |
| 3 | ಪಶ್ಚಿಮ | 199577 |
| 4 | ಉತ್ತರ | 168742 |
| 5 | ದಕ್ಷಿಣ | 191035 |
| **ಒಟ್ಟು** | | **825150** |

**ಅನುಬಂಧ-2**

| ಕ್ರ.ಸಂ | ಪಾಲಿಕೆ | ಅರ್ಜಿಗಳ ಸಂಖ್ಯೆ |
|---|---|---|
| 1 | ಕೇಂದ್ರ | 46 |
| 2 | ಪೂರ್ವ | 1720 |
| 3 | ಪಶ್ಚಿಮ | 2115 |
| 4 | ಉತ್ತರ | 2770 |
| 5 | ದಕ್ಷಿಣ | 1657 |
| **ಒಟ್ಟು** | | **8308** |

**ಅನುಬಂಧ-3**

| ಕ್ರ.ಸಂ | ಪಾಲಿಕೆ | ಅರ್ಜಿಗಳ ಸಂಖ್ಯೆ |
|---|---|---|
| 1 | ಕೇಂದ್ರ | 0 |
| 2 | ಪೂರ್ವ | 192 |
| 3 | ಪಶ್ಚಿಮ | 181 |
| 4 | ಉತ್ತರ | 221 |
| 5 | ದಕ್ಷಿಣ | 224 |
| **ಒಟ್ಟು** | | **818** |

**ಅನುಬಂಧ-4**

| ವಾರ್ಡ್ ಹೆಸರು | ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ಅನುಮೋದನೆ ನೀಡಲಾದ ಅರ್ಜಿಗಳ ಸಂಖ್ಯೆ |
|---|---|---|
| ದೊಡ್ಡಬಿದರಕಲ್ಲು | 353 | 28 |
| ಹೆಮ್ಮಿಗೆಪುರ | 406 | 32 |
| ಹೇರೋಹಳ್ಳಿ | 167 | 3 |
| ಕೆಂಗೇರಿ | 93 | 2 |
| ಉಲ್ಲಾಳು | 167 | 4 |
| **ಒಟ್ಟು** | **1186** | **69** |